International Journal of Kannada Research
www.kannadajournal.com

ISSN: 2454–5813
IJSR 2017; 3(2): 12-15
© 2017 IJKS
www.kannadajournal.com
Received: 04-02-2017
Accepted: 05-03-2017

**ಮುನಿರಾಜು.ಎಸ್.ವಿ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಭಾಷೆ ಮತ್ತು ಅನುವಾದ ವಿಭಾಗ ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಚಿತ್ತೂರು ಜಿಲ್ಲೆ ಆಂಧ್ರಪ್ರದೇಶ

**Correspondence**
**ಮುನಿರಾಜು.ಎಸ್.ವಿ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಭಾಷೆ ಮತ್ತು ಅನುವಾದ ವಿಭಾಗ ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ, ಚಿತ್ತೂರು ಜಿಲ್ಲೆ ಆಂಧ್ರಪ್ರದೇಶ

# ಸಾ.ಶಿ.ಮರುಳಯ್ಯನವರ ಸಾಹಿತ್ಯದಲ್ಲಿ ವೈಚಾರಿಕ ಚಿಂತನೆ

**ಮುನಿರಾಜು.ಎಸ್.ವಿ.**

## ಪ್ರಸ್ಥಾವನೆ

ಕನ್ನಡ ಸಾರಸ್ವತ ಲೋಕದ ದಿಗ್ಗಜ ಸಾ.ಶಿ. ಮರುಳಯ್ಯನವರು ೨೯ ನೇ ಜನವರಿ ೧೯೩೧ ರಲ್ಲಿ ಶ್ರೀ ಶಿವರುದ್ರಯ್ಯ ಮತ್ತು ಶ್ರೀಮತಿ ಸಿದ್ದಮ್ಮ ದಂಪತಿಗಳಲ್ಲಿ ಜನಿಸಿದರು. ಇವರ ಹುಟ್ಟೂರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಸಾಸಲು ಗ್ರಾಮ. ಪ್ರಾಥಮಿಕ ವಿದ್ಯಾಭ್ಯಾಸ ಹುಟ್ಟೂರಿನಲ್ಲಿ ಮುಗಿಸಿದ, ಇವರಲ್ಲಿ ಓದಿ ವಿದ್ಯಾವಂತನಾಗಿ ಅಧ್ಯಾಪಕನಾಗಬೇಕೆಂಬ ಮಹತ್ವಾಕಾಂಕ್ಷೆ ಆಗಲೇ ದೃಢವಾಗಿತ್ತು. ಮುಂದೆ ಅವರ ಆಸೆಯಂತೆಯೇ ಅಧ್ಯಾಪಕರಾಗಿ, ಸಾಹಿತಿಯಾಗಿ ವಿಮರ್ಶಕರಾಗಿ ವಿಚಾರ ದಾರ್ಶನಿಕರಾಗಿ ಉತ್ತಮ ವಾಗ್ಮಿಗಳಾಗಿದ್ದರು. ಮರುಳಯ್ಯನವರು ತಮ್ಮ ೧೦ ನೆಯ ವಯಸ್ಸಿನಲ್ಲಿಯೆ ಸಬರಮತಿ ಆಶ್ರಮದಲ್ಲಿ ಗಾಂಧೀಜಿಯವರನ್ನು ಸಂದರ್ಶಿಸಿದ್ದವರು, ಆಗಲೇ ಅವರಲ್ಲಿ ರಾಷ್ಟೀಯ ಭಾವನೆ ಬೆಳೆಯಿತು. ಅನಂತರದ ಕಾಲೇಜು ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ರಾಷ್ಟೀಯತೆಯನ್ನು ಮೆರೆದ ಮೇರುವ್ಯಕ್ತಿ, ಆಗಾಗಲೇ ಸ್ವಾತಂತ್ರ್ಯವನ್ನು ಕುರಿತು ಹಲವಾರು ಕೃತಿಗಳು ಅವರ ಕೈಯಿಂದ ಮೂಡಿಬಂದವು.

ಶ್ರೀಯುತರಿಂದ ನಾಟಕಗಳು ಜೀವನ ಚರಿತ್ರೆ ಸೇರಿದಂತೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾದ ಕೆಂಗನಕಲ್ಲು ಎಂಬ ಮಹತ್ ಕೃತಿಗಳು ಮೂಡಿ ಬಂದಿವೆ. ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ ಎಂಬ ಪ್ರೌಢಪ್ರಬಂಧಕ್ಕೆ ಪಿಎಚ್.ಡಿ ಪದವಿಯನ್ನು ಗಳಿಸಿದ್ದಾರೆ. ಇವರಿಗೆ ಸಾಹಿತ್ಯ ಆಕಾಡೆಮಿ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಾಹಿತ್ಯ ಪರಿಷತ್ತಿನ ಏಳಿಗೆಗೆ ಶ್ರಮಿಸಿದ್ದಾರೆ.

ಭಾರತೀಯ ಸಮಾಜದಲ್ಲಿ ಅಜ್ಞಾನ, ಮೂಢನಂಬಿಕೆ, ಅಂಧ ಧರ್ಮಾಚರಣೆ ತಾಂಡವಾಡುತ್ತಿದ್ದ ಸಂದರ್ಭದಲ್ಲಿ ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ಭಾರತದ ಜನಜೀವನದಲ್ಲಿ ಸ್ವಾಭಿಮಾನ ಹಾಗೂ ಸ್ವಾತಂತ್ರ್ಯ ವಿಚಾರಧಾರೆಗಳು ಮೂಢಲಾರಂಭಿಸಿದವು. ಪಾಶ್ಚಾತ್ಯರ ವಿಚಾರಗಳು ನಮ್ಮ ನಾಡಿನ ವಿಚಾರವಂತರ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿದವು. ಸಮಾಜದಲ್ಲಿದ್ದ ಅವೈಚಾರಿಕತೆ ಅಂಧಶ್ರದ್ಧೆ ಇತ್ಯಾದಿಗಳ ನಿವಾರಣೆಗೆ ವಿಚಾರವಂತರು ಕೈಹಾಕಿ ಜಾತಿವ್ಯವಸ್ಥೆ, ಮೇಲು–ಕೀಳು ಎಂಬ ಭಾವನೆ ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಮೋಸ, ಸುಲಿಗೆ, ಅನ್ಯಾಯಗಳೆಂಬ ಅಂಕುಡೊಂಕುಗಳನ್ನು ತಿದ್ದಲು ಮುಂದಾದರು ಹೀಗೆ ವಿಚಾರ ಸಾಹಿತ್ಯವು ಹೊಸಗನ್ನಡ ಕಾಲಘಟ್ಟದಲ್ಲಿ ಬೆಳೆಯಿತು.

ಸಾಹಿತ್ಯ ಸೃಷ್ಠಿಯ ಆರಂಭದಿಂದಲೂ ವೈಚಾರಿಕತೆಯ ಬೀಜಗಳು ಭಿತ್ತಿರುವುದು ಚಿಗುರಿರುವುದು, ಹಾಗೆಯೇ ಹೆಮ್ಮರವಾಗಿ ಬೆಳೆದಿರುವುದನ್ನು ನಾವು ನೋಡಬಹುದು. ಭಾರತದ ಮಹಾಕಾವ್ಯಗಳಾದ ಮಹಾಭಾರತ, ರಾಮಾಯಣ ಕೃತಿಗಳ ಸೃಷ್ಠಿ ಪ್ರತಿಸೃಷ್ಠಿಯಲ್ಲಿ ವೈಚಾರಿಕತೆಯು ಚಿಗುರೊಡಿರುವುದನ್ನು ಕಾಣಬಹುದು. ವಚನಕಾರರಲ್ಲೂ ವೈಚಾರಿಕತೆಯೂ ಬೆಳೆದು ನಿಂತಿರುವುದನ್ನು ಕಾಣುವುದಾದರೆ ಆಧುನಿಕ ಕಾಲದ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ವೈಚಾರಿಕತೆಯೂ ಬೆಳೆದು ಕವಲೊಡೆದಿರುವುದನ್ನು ನೋಡಬಹುದು., ಕನ್ನಡದಲ್ಲಿ ಶುದ್ಧ ವೈಚಾರಿಕ ಸಾಹಿತ್ಯ ಪ್ರಕಟಗೊಂಡದ್ದು ಸ್ವಾತಂತ್ರ್ಯ ನಂತರದಲ್ಲಿಯೇ. ಆದರೆ ಅದರ ಪರಂಪರೆಯ ಬೇರುಗಳು ೧೨ ನೆಯ ಶತಮಾನದ ವಚನಕಾರರ ಮುಂದಿರುವ ಉದ್ದೇಶ ಏನೇ ಆಗಿದ್ದರೂ ಅವರ ವಚನಗಳು ನಮಗಿಂದು ದಾರಿದೀಪವಾಗುಷ್ಟರ ಮಟ್ಟಿಗೆ ಗುಣಾತ್ಮಕ ಅಂಶಗಳನ್ನೊಳಗೊಂಡಿವೆ. ಅಂದಿನ ಕಾಲಕ್ಕೆ ಬೃಹದಾಕಾರವಾಗಿ ಬೆಳೆದಿದ್ದ ಜಾತಿಯ ವಿರುದ್ದ ಸಮರ ಸಾರಿದ ಬಸವಣ್ಣ ವೈಚಾರಿಕ ಪ್ರಜ್ಞೆಯನ್ನು ಬೆಳಸಿ ಸಾಮಾಜಿಕ ಸಂಘರ್ಷಕ್ಕೆ ನಾಂದಿ ಹಾಡುತ್ತಾರೆ. ಇದೇ ರೀತಿ ಭಕ್ತಿ ಮಾರ್ಗದಲ್ಲಿ ಸಾಗಿದ ದಾಸಸಾಹಿತ್ಯ ಎಲ್ಲವನ್ನು ಸಮರ್ಪಣ ಭಾವದಿಂದ ಕಂಡರೂ, ದೈವವೇ ಪ್ರಮುಖವಾದರೂ ಸಾಮಾಜಿಕ ಸಂಘರ್ಷಕ್ಕೆ ಒಳಗಾಗುವಂತ ಸಮಾನತಾ ವಾದವನ್ನು

ಮಂಡಿಸುತ್ತಾರೆ. ಸಾಹಿತ್ಯದಲ್ಲಿ ಹಾಸು ಹೊಕ್ಕಾಗಿ ಬೆಳೆಯುತ್ತಾ ಬಂದಿರುವ ವೈಚಾರಿಕತೆ ದಿನದಿಂದ ದಿನಕ್ಕೆ ಮೇಲ್ಮಟ್ಟಕ್ಕೆರುತ್ತಲೇ ಬಂದಿದೆ ಆಧುನಿಕ ಸಾಹಿತಿಗಳು ವೈಚಾರಿಕತೆ ಮನೋಭಾವ ಬೆಳೆಸಲು ಅಧಿಕ ಶ್ರಮ ಪಟ್ಟಿದ್ದಾರೆ.

"ಇವತ್ತಿನ ದಿನ ಯಾವ ವಿಷಯವೇ ಇರಲಿ, ಅದನ್ನು ಇಂಥವರು ಹೇಳಿದರು ಆದುದರಿಂದ ಒಪ್ಪಬೇಕು ಎಂಬ ಮಾತಿಲ್ಲ. ಹೇಳಿದ ಮಾತು ಸಾಧಾರವಾಗಿರಬೇಕು. ಆ ತನಕ ನಮಗೆ ತಿಳಿದು ಬಂದಿರುವ ಇತರ ಜ್ಞಾಪಕಗಳ ತುಲನನೆಗೆ ಸಿಗುವಂತಿರಬೇಕು"[೧] ಎಂಬುದನ್ನು ಮುಕ್ತ ಮನಸ್ಸಿನಿಂದ ನಾವು ಒಪ್ಪುವಂತದಾಗಿದೆ. ಒಳಿತು ಕೆಡುಕುಗಳನ್ನು ಕುರಿತು ಸಮಾಲೋಚಿಸುವ ಮೂಲಕ ವೈಯಕ್ತಿಕ ಸ್ವಾಯತ್ತತೆಯನ್ನು ಬೆಳೆಸಲು ತರ್ಕಬದ್ಧವಾಗಿ ಚರ್ಚಿಸುವ ಗುಣ ಅತ್ಯವಶ್ಯಕ. ಮಗು ಸ್ವತಂತ್ರವಾಗಿ ಕ್ರಿಯಾಶೀಲವಾಗಿರುವುದರ ಜೊತೆಗೆ ಸ್ವತಂತ್ರವಾಗಿ ಆಲೋಚಿಸುವಂತೆ ಮಾಡುವ ಪ್ರವೃತ್ತಿಯನ್ನು ವೈಚಾರಿಕತೆಯೆಂದು ಕರೆಯಬಹುದು" [೨]. ಅಂದ ಹಾಗೆ "ಯಥಾಸ್ಥಿತಿಯನ್ನು ಶಂಕಿಸುವುದು, ಪ್ರತಿಷ್ಠಿತ ಪ್ರತಿಷ್ಠಾಪಿತ ಸಂಸ್ಥೆ ಸಂಪ್ರದಾಯ ಸಂಕೇತಗಳನ್ನು, ಮೌಲ್ಯಗಳನ್ನು ಕುರಿತು ಭಿನ್ನಪ್ರತಿಕ್ರಿಯೆ ವ್ಯಕ್ತಮಾಡುವುದು ವೈಚಾರಿಕತೆಯ ನಿತ್ಯಧರ್ಮ".[೩]

ಸಮಾಜದ ದ್ವಂದ್ವಗಳಿಂದ ಬದುಕು ಕಟ್ಟಿಕೊಳ್ಳುವುದು ಅಸಾಧ್ಯ ಅಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಶೋಷಿತರ ಪರವಾಗಿ ನಿಲ್ಲುವುದು ವಿಚಾರವಂತರಾದಾಗ ಮಾತ್ರ ಸಾಧ್ಯ. ನಮ್ಮ ಸಮಾಜದಲ್ಲಿನ ಅನೇಕ ಅರ್ಥಹೀನ ಆಚರಣೆಗಳು, ಪ್ರಜ್ಞಾವಂತ ಸಮಾಜವನ್ನು ದಿಕ್ಕು ತಪ್ಪಿಸುತ್ತವೆ. ಅದರ ಆಗುಹೋಗುಗಳನ್ನು ಕುರಿತು ಉತ್ತಮ ಆಲೋಚನ ಕ್ರಮಗಳನ್ನು ರೂಢಿಸಿಕೊಳ್ಳುವುದು ವೈಚಾರಿಕತೆಯ ನೆಲೆಯಾಗಿದೆ. ಅಂತೆಯೆ ಸಾ ಶಿ ಮರುಳಯ್ಯನವರ ಕೆಲವು ಕೃತಿಗಳಲ್ಲಿ ವೈಚಾರಿಕ ಅಭಿಪ್ರಾಯಗಳನ್ನು ಗಮನಿಸಬಹುದಾಗಿದೆ.

ನಾವು ವಿಚಾರವಂತರಾದಾಗ ಮಾತ್ರ ಸಮಾಜ ಪ್ರಗತಿ ಪಥದಲ್ಲಿ ಮುನ್ನಡೆಯಲು ಸಾಧ್ಯ ಇಲ್ಲವಾದಲ್ಲಿ, ಉಳ್ಳವರು ಇಲ್ಲದವರ ಮೇಲೆ ನಡೆಸುವ ಆಕ್ರಮಣಗಳಿಗೆ ನಿರ್ಬಂಧ ಹಾಗೂ ಶೋಷಿತರ ಪರ ಸಮರ್ಪಕವಾಗಿ ಶ್ರಮಿಸುವಲ್ಲಿ ನಡೆಯುವಂತಾಗುತ್ತದೆ. ಸಮಾಜದಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಸ್ಥಿತ್ಯಂತರಗಳು ಅಂತೆಯೆ ಮೌಢ್ಯ, ಮೂಢನಂಬಿಕೆಗಳು, ಸ್ತ್ರೀ ಶೋಷಣೆ ಬಡವರ ಮೇಲೆ ಆಕ್ರಮಣ ಕೀಳರಿಮೆ, ಲಿಂಗಭೇಧ, ಜಾತಿ ಪದ್ದತಿ, ವರ್ಗವ್ಯವಸ್ಥೆ, ವರ್ಣವ್ಯವಸ್ಥೆಯ ಅಂತ್ಯದ ಬಗ್ಗೆ ಏಕ ರೀತಿ ವ್ಯಕ್ತವಾಗಿದೆ.

"ಎಲ್ಲದರ ಅಂತ್ಯಕ್ಕೂ ಹೊಸೆದುಕೊಂಡೇ ಇಹುದು ಹೊಸತೊಂದು ನಾಂದಿ!"[೪] ದೈವ ಧರ್ಮದ ಬಗೆಗಿನ ಅನಿಸಿಕೆಗಳು ಜನರ ದಾರುಣ ಬದುಕಿನ ಚಿತ್ರಣದ ಮೂಲಕ ನವಸಮಾಜವೊಂದನ್ನು ಕಟ್ಟಬೇಕಾಗಿರುವುದು ಅತ್ಯವಶ್ಯಕ ಹಾಗೇಯೇ ಪ್ರಸ್ತುತದಲ್ಲಿನ ಕೋಮುವಾದ ಅಸಮಾನತೆ, ಸೋಲು ಕ್ರೌರ್ಯ ದ್ವೇಷಾಸೂಯೆ, ಮನೋಧಿಕಾರ ಮುಂತಾದ ಆಗುಹೋಗುಗಳು ನಮ್ಮ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡಿವೆ.

---

1. ಶಿವರಾಮ ಕಾರಂತ – ವಿಚಾರ ಸಾಹಿತ್ಯ ಸಿರ್ಮಾಣ ಪುಟ ೧೪
2. ಬಿ.ವಿ. ವೀರಭದ್ರಪ್ಪ – ಮೇದಾಂತ ರೆಜಿಮೆಂಟ್ ಮತ್ತು ಇತರ ವೈಚಾರಿಕ ಲೇಖನಗಳು ಪುಟ ೮೩
3. ಗೌರೀಶ ಕಾಯ್ಕಿಣಿ – ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ ಪುಟ ೧೧
4. ಸಾ.ಶಿ.ಮ ಸಮಗ್ರಕಾವ್ಯ ಪುಟ ೧೬

ಭಾರತೀಯರ ಜೀವನದಲ್ಲಿ ಅಂತ: ಸತ್ವವಾಗಿ ಪುಟಿದೆದ್ದ ಧರ್ಮವು ಮಾನವನನ್ನು, ಮಾನವ ಸಮಾಜವನ್ನು ಪರಿಪೂರ್ಣತೆಯಡೆಗೆ ಕೊಂಡೊಯ್ಯುವ, ಎತ್ತಿ ಹಿಡಿಯುವ, ಪೋಷಿಸುವ, ಪ್ರಚೋದಿಸುವ, ಧಾರಣ ಮಾಡುವ ಆಂತರಿಕ ಶಕ್ತಿಯಾಗಿದೆ. ಯಾವ ಅಂತ:ಸಾಕ್ಷಿಯ ಪ್ರಜ್ಞೆ ಅಥವಾ ಜಾಗೃತಿಯಿಂದ ಮನುಷ್ಯ ತನ್ನೆಲ್ಲ ಬಾಲಿಕ ಮತ್ತು ಭಾವುಕ ವಿಚಾರಗಳಿಂದ ಹೊರಬಂದು, ಹೊರಪ್ರಲೋಭನೆಗಳಿಗೆ ಮಾರು ಹೋಗದಂತೆ ನೀತಿಯುತವಾಗಿ ನಡೆಯುತ್ತ, ಮಾನವೀಯತೆಯೆಡೆಗೆ ನಡೆಯಿಸುವ ಚೈತನ್ಯಶಕ್ತಿಯೇ ಧರ್ಮವಾಗಿದೆ.

ಇಂತಹ ಮಾನವೀಯ ಧರ್ಮದಿಂದ ತನ್ನ ಸುತ್ತಲಿನ ಜನರನ್ನು ಅಥವಾ ಜನಸಮುದಾಯವನ್ನು ಮುನ್ನಡೆಸಬೇಕೆಂಬ ಉದಾತ್ತಾ ಧ್ಯೇಯ ಸಾಶಿಮರ ಕೃತಿಯಾದ "ಭಾರತ ದರ್ಶನ" ವೆಂಬ ಕತೆಯಲ್ಲಿ ಅಲೆಗ್ಸಾಂಡರ್‌ನಂತಹ ಅಪ್ರತಿಮ ವೀರ ಪೌರವನಂತಹ ಸ್ವಾಭಿಮಾನಿಯಾದ ದೇಶಭಕ್ತನನ್ನು ಕೆಲವರು ಕುತಂತ್ರಿ ರಾಜರ ಸಹಾಯದಿಂದ ಸೋಲಿಸುತ್ತಾನೆ. ಆದರೆ ಪೌರವನ ಧೈರ್ಯ ಮತ್ತು ದೇಶಪ್ರೇಮ ಅಲೆಗ್ಸಾಂಡರಿಗೆ ಬಹಳ ಮೆಚ್ಚುಗೆಯಾಗುತ್ತದೆ. ಅಹಿಂಸಾ ಧರ್ಮಕ್ಕೆ ಶರಣಾದ ಅಲೆಗ್ಸಾಂಡರ್ ಪೌರವನನ್ನು ಸ್ನೇಹಿತನಂತೆ ಕಾಣುತ್ತಾನೆ. ಇವರ ಸಂಕೇತವಾಗಿ ಗೋಹತ್ಯಾ ಮತ್ತು ಗೋಮಾಂಸ ಸ್ವೀಕಾರ ನಿಷೇಧದ ಆಜ್ಞೆಗಳನ್ನು ಜಾರಿಗೊಳಿಸುತ್ತಾನೆ. ಮುಂದೆ ಮೂರು ಸನ್ಯಾಸಿಗಳಿಂದ ಆತನಿಗೆ ಭಾರತೀಯ ಧರ್ಮತತ್ವಗಳ ದರ್ಶನವಾಗುತ್ತದೆ.

ಧರ್ಮ ಅವನತಿಗೊಂಡರೆ ಸಮಾಜದ ಏಳ್ಗೆ ಸಾಧ್ಯವಿಲ್ಲ ಅದರಿಂದ ದುಷ್ಪರಿಣಾಮವುಂಟಾಗುತ್ತದೆಂಬ ಅಂಶ "ಮಹಾಪ್ರಸಾದಿ" ಕಾದಂಬರಿಯ ಪಾತ್ರಗಳಾದ ಡಾ॥ ಶಿವಪ್ರಸಾದ್ ಮತ್ತು ನಿಡುವಳ್ಳಿ ಮಠದ ಮಲ್ಲಿಕಾರ್ಜುನಯ್ಯ ಅವರ ಸಂಭಾಷಣೆಯಲ್ಲಿ ವ್ಯಕ್ತಗೊಂಡಿದೆ. ಗುರುಲಿಂಗ ಜಂಗಮ ವಸ್ತುವೊಂದು ಇದನ್ನು ತಿಳಿಯದ ವೀರಶೈವ ಧರ್ಮದಲ್ಲಿ ಭಿನ್ನತೆಯನ್ನು ತರುವವರನ್ನು ಕಂಡು ಲೇಖಕರ ಮನನೊಂದಿದೆ. ಮಠ – ಮಾನ್ಯ – ಪೀಠಗಳಲ್ಲಿ ಲೇಖಕರಿಗೆ ಅಭಿಮಾನ, ಗೌರವ ಭಕ್ತಿಗಳಿದ್ದರೂ ಕೂಡಾ ಅವುಗಳಲ್ಲಿ ಕಂಡು ಬರುವ ಸಂಕುಚಿತ – ಕೀಳರಿಮೆ ಮನೋಭಾವವನ್ನು ಕಂಡು ಬೇಸರಗೊಂಡಿದ್ದಾರೆ. ಸ್ವಾರ್ಥಕ್ಕಾಗಿ ಮಠಗಳನ್ನೂ ಮಠಾಧಿಪತಿಗಳನ್ನೂ ಉಪಯೋಗಿಸಿಕೊಳ್ಳುವ ಅವರ ಬಗ್ಗೆ ಅಸಹನೆ ಸಾತ್ವಿಕ ಕ್ರೋಧವ್ಯಕ್ತವಾಗಿದೆ. ತನ್ನಿಚ್ಚೆಗೆ ಗೆದ್ದಲ ಹುಳು ಹುತ್ತ ಕಟ್ಟುತ್ತದೆ, ಹಾವು ಆ ಹುತ್ತಕ್ಕೆ ಬಂದು ವಾಸ ಮಾಡುತ್ತದೆ. ಹೀಗೆ ಸ್ವಾರ್ಥಿಗಳೆಂಬ ಶಿಷ್ಯರು ಮಠಮಾನ್ಯಗಳಲ್ಲಿ ಹಾವುಗಳಂತೆ ವಾಸಿಸುತ್ತ ಧರ್ಮದ ಅವನತಿಗೆ ಕಾರಣರಾಗುತ್ತಾರೆ. ಗುರುಗಳು ಸಮಾಜದಿಂದ ಬೇರೆಯಾಗಿ ಅಡ್ಡದಾರಿ ಹಿಡಿದರೆ ಜನರೇ ಜಂಗಮರಾಗಿ ಅವರನ್ನು ತಿದ್ದುವ ಮೂಲಕ ಜಾಗೃತಗೊಳಿಸಬೇಕೆಂಬ ವೈಚಾರಿಕ ಅಂಶ ಕಾದಂಬರಿಯಲ್ಲಿದೆ. ಸಂಕಲ್ಪ ಸ್ವಪ್ರಯತ್ನ ಮತ್ತು ಶೀಲಸಂಪನ್ನತೆಯಿದ್ದರೆ ಸಾಮಾನ್ಯನೂ ಸಾಧಕನಾಗುತ್ತಾನೆ ಧಾರ್ಮಿಕ ವ್ಯಕ್ತಿ ಮತ್ತು ವಿಚಾರಗಳ ಬಗ್ಗೆ ಸಾಶಿಮರವರಿಗೆ ಅಪಾರ ಭಕ್ತಿ ಒಲಮೆಯಿದೆ. ಧಾರ್ಮಿಕ ಸಂಸ್ಥೆಗಳು ಪರಿಶುದ್ದವಾಗಿದ್ದು ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡುವ ಮೂಲಕ ರಾಷ್ಟ್ರದ ಏಳ್ಗೆಗೆ ಉತ್ತಮ ಸಮಾಜ ಕಟ್ಟುವ ಕಾರ್ಯ ಹಾಗೂ ಹಾದಿಯನ್ನು ತೋರಿಸಬೇಕು ಎಂಬ ಮಹತ್ತರವಾದ ಕಳಕಳಿಯಿದೆ. ಈ ಕಾರಣದಿಂದ ಧರ್ಮದ ಅನೇಕ ವಿಚಾರಗಳ ವಿಶ್ಲೇಷಣೆ ಇವರ ಕೃತಿಗಳಲ್ಲಿ ಇದೆ.

"ಮಾಮನೆಯಲ್ಲಿ" ಎಂಬ ಕತೆಯಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ಚರ್ಚೆಯಾಗುತ್ತಿದ್ದ ಗುರುಲಿಂಗ ಜಂಗಮಸೇವೆ. ಸ್ತ್ರೀ ಸ್ವಾತಂತ್ರ್ಯ ವಿಧವಾ ವಿವಾಹ ಮುಂತಾದವುಗಳ ವೈಚಾರಿಕ

ಪ್ರಜ್ಞೆಯು ಪ್ರಮುಖವಾಗಿರುವುದನ್ನು ನಾವು ಪ್ರಸ್ತುತದಲ್ಲಿಯೂ ಗುರ್ತಿಸಬಹುದು. ಅಂತಹ ಅರಿವಿನ ಕೊರತೆಯಿರುವ ಸಮಾಜಕ್ಕೆ ಯುವಜನರಲ್ಲಿ ಪ್ರಗತಿಯ ಅರಿವನ್ನು ಮೂಡಿಸುವ ಮೂಲಕ ಸಾಂಸ್ಕೃತಿಕ ಬದುಕನ್ನು ಸಾರ್ಥಕಗೊಳಿಸುವಲ್ಲಿ ವಿಚಾರ ದರ್ಶನವು ಮಹತ್ತರವಾದುದಾಗಿದೆ. ಪ್ರಜ್ಞಾವಂತ ಸಮಾಜದ ಮೇಲೆ ದುಷ್ಪರಿಣಾವನ್ನು ಬೀರುತ್ತಿರುವ. ಜಾತಿ ಪದ್ದತಿಯು ಮಾನವೀಯ ಮೌಲ್ಯಗಳನ್ನು ದೂರಮಾಡುತಿದ್ದು ಅಂತಹ ಪದ್ದತಿಯ ವಿರೋಧತೆಯು ಸಾಶಿಮರಲ್ಲಿ ಬಾಲ್ಯದಲ್ಲಿಯೇ ಪ್ರಭಾವ ಬೀರಿದೆ.

ವೈಚಾರಿಕ ಮಾನವತಾವಾದವು ನಿಜವಾಗಿಯೂ ವೈಯಕ್ತಿಕ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದರೊಂದಿಗೆ ಸಾಮಾಜಿಕ, ಅಸಮಾನತೆ, ಶೋಷಣೆ ಹಾಗೂ ಆರ್ಥಿಕ ಅಸಮಾನತೆಯನ್ನು ಕಿತ್ತು ಹಾಕಿ, ಮಾಧುರ್ಯಮಯವೂ, ಉತ್ಸಾಹಪೂರ್ಣವೂ ಆದ ಜೀವಿತವನ್ನು ಒದಗಿಸಲು ಸಹಾಯಮಾಡಬಲ್ಲದು. ಎಂಬುದನ್ನು ನಾವು ಗಮನದಲ್ಲಿಕೊಳ್ಳಬೇಕಾಗಿದೆ.

'ಆ ಮುಖ ಈ ಮುಖ ಸ್ತ್ರೀ ಮುಖ' ಕತೆ ನೈಜ ಘಟನೆಯೊಂದರೆ ಕಥಾರೂಪವಾದದ್ದು. ಗರತಿಯಾಗಿ ಬಾಳುತ್ತಿದ್ದ ಗಂಗಮ್ಮನ ಗಂಡನನ್ನು ಕೆಲವರು ದುಷ್ಟರು ಕೊಲೆಗೈದರು. ಆಕೆ ಪೋಲಿಸಿಗೆ ದೂರುಕೊಡಲು ಹೋಗುತ್ತಾಳೆ. ಇದನ್ನು ಅರಿತ ದುಷ್ಟರು ಅವಳನ್ನು ವಿವಸ್ತ್ರಳನ್ನಾಗಿಸಿ ದೇವಾಲಯದಲ್ಲಿ ಹಾಕುತ್ತಾರೆ. ಕೊನೆಗೆ ಚಿಂದಿ ಸೀರೆಯಲ್ಲಿ ನ್ಯಾಯಲಯಕ್ಕೆ ಬಂದ ಗಂಗಮ್ಮ ನಿರ್ಭೀತಳಾಗಿ ತನಗಾದ ಅನ್ಯಾಯವನ್ನು ಹೇಳಿಕೊಳ್ಳುತ್ತಾಳೆ. ಮಾನ ಸಂರಕ್ಷಣೆಗಾಗಿ ನ್ಯಾಯದೇವತೆಯ ಮೈಮೇಲಿನ ಸೀರೆಯನ್ನೇ ಕಸಿದು ಉಟ್ಟುಕೊಳ್ಳುತ್ತಾಳೆ. ಕೊನೆಗೆ ಆಕೆ ನಿರಪರಾಧಿ ಎಂದು ನ್ಯಾಯಲಯ ತೀರ್ಪು ನೀಡುತ್ತದೆ. ಅನ್ಯಾಯವನ್ನು ಪ್ರತಿಭಟಿಸಿ ನ್ಯಾಯ ದೊರಕಿಸಿಕೊಂಡ ಗಂಗಮ್ಮನ ಪಾತ್ರಕತೆಯಲ್ಲಿ ನೈಜವಾಗಿ ಮೂಡಿ ಬಂದಿದೆ. ಗ್ರಾಮೀಣ ಶೈಲಿಯ ಸೊಗಡು ನಿರೂಪಣೆಗೆ ಸಹಜ ಆಕರ್ಷಣೆ ನೀಡಿದೆ. ಅಧಿಕಾರ ದರ್ಪ ಶೋಷಣೆ ಮುಂತಾದವುಗಳ ವಿರುದ್ಧ ಹೋರಾಟ, ಮಾನವೀಯತೆ, ಸಮತಾವಾದ, ಸ್ವಾಭಿಮಾನ, ಸಚ್ಚಾರಿತ್ರ್ಯ ಮುಂತಾದವುಗಳನ್ನು ಕುರಿತು ತೀವ್ರತರದ ತುಡಿತಗಳು, ಚಿಂತನೆಗಳು ಇಲ್ಲಿ ವ್ಯಕ್ತವಾಗಿವೆ. ನವಸಮಾಜರಲ್ಲಿ ಹಾಸುಹೊಕ್ಕಾಗಿದ್ದು ಹೀನ ಕೃತ್ಯ ಮೇಲು ಕೀಳೆಂಬ ಭಾವ, ಸ್ತ್ರಿ ಶೋಷಣೆ ಇವು ವೈಚಾರಿಕತೆಗೆ ಇರುವ ಅಡೆತಡೆಗಳು.

'ಅಂತರಂಗಶುದ್ಧಿ' ಎಂಬ ಕತೆಯಲ್ಲಿ ಕಳಂಕಿನಿಯೆಂದು ತೀರ್ಮಾನಿಸಿ ಜನತೆ ಮೇರಿ ಮ್ಯಾಗ್ಡಲೀನಳನ್ನು ಕಲ್ಲುಗಳಿಂದ ಹೊಡೆದು ಕೊಲ್ಲಲು ಮುಂದಾಗುತ್ತಾರೆ. ಆಕೆ ಏಸುವಿನ ಮೊರೆ ಹೋಗುತ್ತಾಳೆ. ಏಸು ಆಕೆಯನ್ನು ಸಮಾದಾನಪಡಿಸುತ್ತಾನೆ. 'ಆಕೆ ತಪ್ಪು ಮಾಡಿರುವುದು ನಿಜ. ಆಗಿನ ಪದ್ದತಿಯಂತೆ ಆಕೆಗೆ ಶಿಕ್ಷೆಯಾಗಬೇಕು, ನಿಜ. ಆದರೆ ನಿಮ್ಮಲ್ಲಿ ಇದುವರೆಗೆ ಯಾರು ಒಂದೇ ಒಂದು ತಪ್ಪನ್ನು ಮಾಡಿಲ್ಲವೋ ಅಂಥವರು ಮಾತ್ರ ಮೊದಲ ಕಲ್ಲು ಹೊಡೆಯಿರಿ' ಎಂದಾಗ ಎಲ್ಲರಿಗೂ ತಮ್ಮ ತಪ್ಪುಗಳ ಅರಿವಾಗಿ ಓಡಿ ಹೋಗುತ್ತಾರೆ. ಏಸುವಿನ ಕ್ಷಮಿಸುವಗುಣವನ್ನು ಕತೆ ಮನಮುಟ್ಟುವಂತೆ ಬಿಂಬಿಸುತ್ತದೆ.

ಮನುಷ್ಯನ ಜೀವನದಲ್ಲಿ ಅಂತಃಸತ್ವವಾಗಿ ಪುಟಿದೆದ್ದ ಧರ್ಮವು ಮಾನವನನ್ನು, ಮಾನವ ಸಮಾಜವನ್ನು ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವ ಆಂತರಿಕ ಶಕ್ತಿಯಾಗಿದ್ದು ಹೊರಪ್ರಲೋಭೆಗಳಿಗೆ ಅಂಟಿಕೊಳ್ಳದೆ ನೀತಿಯುತವಾಗಿ ಮಾನವೀಯತೆಯೆಡೆಗೆ ನಡೆಸುವ ಚೈತನ್ಯ ಶಕ್ತಿಯಾಗಿದೆ. ಇಂಥ ಮಾನವೀಯ ಧರ್ಮದಿಂದ ತನ್ನ ಸುತ್ತಲಿನ ಜನರನ್ನು ಅಥವಾ ಜನಸಮುದಾಯವನ್ನು ಮುನ್ನೆಡೆಸಬೇಕೆಂಬ ಉದಾತ್ತ ಧ್ಯೇಯವನ್ನಿಟ್ಟುಕೊಂಡಿರುವುದು ಇಲ್ಲಿ ವ್ಯಕ್ತವಾಗುತ್ತದೆ.

'ಪೈಗಂಬರ ಕೊನೆಯ ದಿನ' ಕತೆಯಲ್ಲಿ ಮೊಹಮ್ಮದರು ಒಂದು ಚೇಳಿನ ಬಗ್ಗೆ ತೋರಿದ ಅನುಕಂಪ ಮತ್ತು ಅಹಿಂಸಾ ತತ್ವದ ಚಿತ್ರಣವಿದೆ. 'ನಿತ್ಯ ಜೀವನದಲ್ಲಿ ಶುದ್ಧನಾಗಿ ಬದುಕುವುದೇ ತಪಸ್ಸು. ಜೀವವೇ ದೇವ, ದುಡಿಮೆಯೇ ದೇವರು ಅನಾಥರನ್ನು ರಕ್ಷಿಸುವ ಧರ್ಮ' – ಇತ್ಯಾದಿ ತತ್ವಆಧಾರಿತ ವಿಚಾರಗಳನ್ನು ಮೊಹಮ್ಮದರ ಜೀವನದಲ್ಲಿ ಹಾಸುಹೊಕ್ಕಾಗಿತ್ತು ಎಂಬ ಅಂಶಗಳನ್ನು ಕತೆ ವ್ಯಕ್ತಪಡಿಸುತ್ತದೆ.

'ಆವಾವ ಪರಿಯಲ್ಲಿ ಕಾಡಿತ್ತು ಮಾಯೆ' ಎರಡನೆಯ ಕತೆ. ಹೆಣ್ಣಿನ ಬಾಲ್ಯ, ಯೌವನ ಮತ್ತು ತಾಯತನ–ಈ ಮೂರು ಅವಸ್ಥೆಗಳನ್ನು ಚಿತ್ರಿಸುವ ಕತೆಯಲ್ಲಿ ಪ್ರೇಮ ಮತ್ತು ಮಾತೃತ್ವಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದೆ, ಉತ್ತಮ ಪುರುಷನಲ್ಲಿ ಹೇಳಿರುವ ಈ ಕತೆಯು ತುಂಬ ಆತ್ಮೀಯವೆನ್ನಿಸುತ್ತದೆ.

ಬುದ್ಧನಿಂದ ಅಂಗುಲಿಮಾಲಾ ತನ್ನ ಮಾನವ ಹತ್ಯೆಯನ್ನು ನಿಲ್ಲಿಸಿ ಅಹಿಂಸಾ ವ್ರತ ಸ್ವೀಕರಿಸಿದ ಕತೆ 'ಮಾಡಿದ್ದುಣ್ಣೋ ಮಹರಾಯ' ಕತೆಯಲ್ಲಿದೆ.

ಪುರುಷ ಸಿಂಹ ಕಾದಂಬರಿಯಲ್ಲಿ ರಾಣಾ ಪ್ರತಾಪ ಸಿಂಹ ದಿಲ್ಲಿಯ ಸುಲ್ತಾನನ್ನು ಎದುರಿಸಿದ ದೇಶಪ್ರೇಮಿ. ಸ್ವಾಭಿಮಾನವನ್ನು ಮೆರೆದ ಮಹಾಪುರುಷನ ಸಾಹಸಗಳು ತಾಯ್ನಾಡಿಗೆ ಮುಡುಪಾಗಿರುವುದನ್ನು ಬಿಂಬಿಸುತ್ತದೆ. ಪ್ರತಾಪ ಸಿಂಹನ ಮಗಳು ತುಣುಕು ರೊಟ್ಟಿಗಾಗಿ ಪೆಟ್ಟು ತಿಂದ ಸನ್ನಿವೇಶ ಪ್ರತಿಕಾರವಾಗಿ ಪ್ರತಾಪಸಿಂಹನ ಪ್ರತಿಜ್ಞೆ, ರಾಷ್ಟ್ರಪ್ರೇಮ, ಸ್ವಜನ, ಸ್ವಧರ್ಮ ರಕ್ಷಣೆಯಲ್ಲಿ ಅವನ ನಿಷ್ಠೆ ಆದರ್ಶಗಳು ಸಾಶಿಮರವರ ಮೇಲೆ ಪ್ರಭಾವ ಬೀರುವ ಐತಿಹಾಸಿಕ ಅಂಶಗಳು ಪ್ರಸ್ತುತ ಸಮಾಜಕ್ಕೆ ದಾರಿದೀಪ ಹಿಡಿಯುತ್ತದೆ. ಮಾನವೀಯ ಸದ್ಗುಣಗಳನ್ನು ಮೂಡಿಸಬೇಕೆಂಬ ಲೇಖಕರ ಆಶಯ ಸ್ವಾಗತಾರ್ಹವಾದುದು.

ಪ್ರಸ್ತುತ ಸಮಾಜ ಮಾನವೀಯ ಮೌಲ್ಯಗಳನ್ನು ಮರೆಮಾಚುವಂತಹ ಕೆಳಮಟ್ಟದಲ್ಲಿ ನಿಂತು ನೋಡುತ್ತಿದೆ. ಉದಾಹರಣೆಗೆ ಅಪಘಾತವೊಂದರಲ್ಲಿ ಸಾಯುವ ಸಿತಿಯಲ್ಲಿರುವ ವ್ಯಕ್ತಿಯನ್ನು ಬದುಕಿಸುವ ಬದಲು ವಿಡಿಯೋ ಚಿತ್ರೀಕರಣ ಮಾಡುವಂತಹ ಸಂಧರ್ಭಗಳಷ್ಟೋ ದಾಖಲಾಗಿವೆ. ಇಂತಹ ಸಂದರ್ಭಗಳು ಮನುಷ್ಯ ಮನುಷ್ಯನೊಂದಿಗಿನ ಬಾಂಧವ್ಯವನ್ನು ಹಾಳುಮಾಡುವಷ್ಟು ಕೀಳುಮನೋಭಾವವನ್ನು ಹೊಂದಿವೆ.

ಸಮಾಜದಲ್ಲಿ ಭ್ರಷ್ಟಾಚಾರವು ಎಲ್ಲೆಡೆಯಲ್ಲಿಯೂ ತಾಂಡವವಾಡುತ್ತದೆ. ಕಡುಬಡವರನ್ನು ಬಿಡದಂತಹ ಹೀನಕೃತ್ಯವೆನಿಸುತ್ತಿದೆ. ಅಂತೆಯೇ ಇಲ್ಲಿ ಬೇಂದ್ರೆಯವರ "ಕುರುಡು ಕಾಂಚಾಣ ಕುಣಿಯುತ್ತಲಿತ್ತು ಕಾಲಿಗೆ ಬಿದ್ದವರ ತುಳಿಯುತ್ತಲಿತ್ತು." ದೇಶದ ಪ್ರಗತಿಗೆ ಪ್ರಜೆಗಳ ಕಷ್ಟಕ್ಕೆ ಸ್ಪಂದಿಸುವ ಬದಲು ರಾಷ್ಟ್ರವನ್ನು ಕೊಳ್ಳೆಹೊಡೆಯುವ ಮಹಾನ್ ಘಾತಕ ಶಕ್ತಿಗಳ ಮೇಲಾಟವೇ ಹೆಚ್ಚು, ಬಡವರ ಹಾಗೂ ಹೆಣ್ಣಿನ ಶೋಷಣೆಗಳು ಲಂಗುಲಗಾಮಿಲ್ಲದೆ ನಡೆಯುತ್ತಿವೆ.

ದೇವರ ಬಗ್ಗೆ ಬೇಸರ ವ್ಯಕ್ತ ಪಡಿಸುವ ಮೂಲಕ ವೈಚಾರಿಕತೆ ಹಾಗೂ ಪ್ರಗತಿಪರವಾಗಿರುವುದನ್ನು ನಾವು ಸಾಶಿಮರಲ್ಲಿ ಕಾಣಬಹುದಾಗಿದೆ.

'ಗ್ರಾಮ ಗಾಂಧಿ' ಎಂಬ ಕತೆಯಲ್ಲಿ ಅಂದಿನ ರಾಜಕೀಯ ಅವ್ಯವಸ್ಥೆಯ ಸಹಜ ಚಿತ್ರಣ ನೀಡುವಲ್ಲಿ ಯಶಸ್ವಿಯಾಗಿದೆ. ಆ ಕತೆಯಲ್ಲಿ ಬರುವ

'ಪಾಲ್ಟಿ ಪಕ್ಸ ಅಂತ ಉಟ್ಟಾಕ್ಕೊಂಡು
ಮಂಡಲ್ಲೋ ಬಂಡಲು ಕಂಡಲ್ದೋ!
ಪಂಚಾಯಿತಿ ಆಗಿ ಪಂಚತ್ವ ಎಚ್ತು'[೫]

ಸತ್ಯ ನಿಷ್ಠನಾದ ವ್ಯಕ್ತಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹಳ

---

೫ ಅರ್ ಬಸವರಾಜ್, ಸಾ.ಶಿ.ಮ ಬದುಕು ಬರಹ ಪುಟ ೩೮

ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ ಎಂಬ ಚಿತ್ರಣ ಇಲ್ಲಿದೆ. ಭಾರತಕ್ಕೊಬ್ಬ ಗಾಂಧಿಯಾದರೆ ಸಾಲದು; ಪ್ರತಿಗ್ರಾಮಕ್ಕೂ ಒಬ್ಬೊಬ್ಬ ಗಾಂಧಿ ಮೂಡಿಬಂದರೆ ರಾಷ್ಟ್ರ ಸುಧಾರಣೆ ಯಾದೀತು ಎಂಬ ಆಶಯ ಇದರಲ್ಲಿದೆ.

ಭಾರತೀಯ ವಾತಾವರಣಕ್ಕೆನುಸಾರಮೂಡಿ ಬಂದಿರುವ ನೆಲದ ಸೊಗಡು ಕತೆಯಲ್ಲಿ ಜನನಿ, ಜನ್ಮಭೂಮಿ, ಸ್ವರ್ಗಕ್ಕಿಂತ ಮಿಗಿಲು ಎಂಬ ತತ್ವ ಪ್ರತಿಪಾದಿತವಾಗಿದೆ. ರಾಜಕೀಯ ಖೈದಿಯಾದ ವೀರನಾಯಕನಿಗೆ ನೇಣು ಹಾಕುವ ಸಂಧರ್ಭದಲ್ಲಿ ಅವನಿಗುಂಟಾಗುವ ಭಾವನೆಗಳನ್ನು ತಾಯ್ನಾಡಿನ ಮೇಲೆ ಇರುವ ಅಪಾರ ಪ್ರೇಮವನ್ನು ಕತೆ ಮನಮುಟ್ಟುವಂತೆ ಚಿತ್ರಿಸುತ್ತದೆ. ಬಾರತೀಯನಾದ ಅವನನ್ನು ಚೀನಾದ ಬೀಜಿಂಗೆನಲ್ಲಿ ನೇಣುಗಂಬಕ್ಕೆ ನಿಲ್ಲಿಸಿದಾಗಲೂ ಅವನಿಗೆ ಮರಣದ ಭಯವಿಲ್ಲ. ತಾಯ್ನಾಡಿನ ಸವಿನೆನಪಿನಲ್ಲಿ ಮರಣವೇ ಅವನಿಗೆ ಸಂತೋಷ ಎನಿಸುತ್ತದೆ. ಪ್ರತಿಯೊಬ್ಬ ಭಾರತೀಯನಲ್ಲು ಆತ್ಮಾಭಿಮಾನ, ಮಾನವತೆಯನ್ನು ಬಿಂಬಿಸುವ ಮೂಲಕ ನಾಡು ನುಡಿ, ದೇಶ ಸೇವೆಗೆ ಎಂಥ ಸಂದರ್ಭದಲ್ಲೂ ಐಕ್ಯತೆಯನ್ನು ಹೊಂದಬೇಕೆಂಬುದಾಗಿದೆ.

'ತೀರ್ಪು' ಎಂಬ ಕತೆಯಲ್ಲಿ. ಸಾಕ್ರಟೀಸ್‌ನ ಕೊನೆಯ ದಿನಗಳ ಚಿತ್ರಣ ಇಲ್ಲಿದೆ. ಆತ ದೇಶದ ಯುವ ಜನಾಂಗವನ್ನು ತನ್ನ ತತ್ವಬೋಧನೆಯಿಂದ ದಾರಿ ತಪ್ಪಿಸಿದ್ದಾನೆ ಎಂಬ ಕಾರಣಕ್ಕಾಗಿ ಹೆಮ್ಲಾಕ್ ವಿಷಕುಡಿಸುವ ಮಾಡಿಸುವ ಮುನ್ನ ವಿಚಾರಣೆಗೆ ಆತನನ್ನು ಗುರಿಪಡಿಸಲಾಗುತ್ತದೆ. ಅಥೆನ್ಸ್ ನಗರದ ಮಹಾಜ್ಞಾನಿ ಸಾಕ್ರಟೀಸ್ ವಿರೋಧಿಗಳ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡುತ್ತಾನೆ. ಆದರೂ ಬಹುಮತ ಆತನಿಗೆ ಇದರಿಲ್ಲವಾದ ಪ್ರಯುಕ್ತ ವಿಷಸೇವಿಸಿ ಅಂತ್ಯ ಕಾಣುತ್ತಾನೆ. ಸತ್ಯದಾರಿಯಲ್ಲಿ ನಡೆಯುವ ಸಾಕ್ರಟೀಸ್ ಸತ್ತ. ಆದರೆ ಬದುಕಿನ ಬಹುಮತಾನುಯಾಯಿಗಳೇನಾದರು? ಅವರು ಬದುಕಿಯೂ ಸತ್ತರು! ಅನ್ಯಾಯದ ತೀರ್ಪನ್ನು ಕತೆ ಮನಮುಟ್ಟುವಂತೆ ಬಿಂಬಿಸುತ್ತದೆ. ಒಂದೆಡೆ ಮಾನವೀಯತೆಯನ್ನು ಬಿಂಬಿಸುವುದಾದರೆ ಮತ್ತೊಂದೆಡೆ ಸತ್ಯಕ್ಕೆ ಬೆಲೆಯಿಲ್ಲದಿರುವುದನ್ನು ಗುರುತಿಸುತ್ತಾ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತ್ಯಂತರಗಳ ಪ್ರತಿಬಿಂಬ ತಾತ್ವಿಕ ಕ್ಷೇತ್ರದೊಳಗಿನ ಸಂಘರ್ಷ ಗೋಚರವಾಗುತ್ತಲೇ ಬಂದಿರುವದನ್ನು ನಾವು ಕಾಣಬಹುದು.

ಉಪಸಂಹಾರ

ಬದುಕು ಜಟಕಾಬಂಡಿ ವಿಧಿ ಅದರ ಸಾಹೇಬ ಎಂಬ ಸೂಕ್ತಿಯಂತೆ ಜೀವನದಲ್ಲಿ ಎದುರು ಬಂದ ಕಷ್ಟಕಾರ್ಪಣ್ಯಗಳನ್ನು ಮೆಟ್ಟಿ ನಿಂತು ಸ್ವಾಸ್ಥ್ಯ ಬದುಕನ್ನು ಕಟ್ಟಿಕೊಳ್ಳುವ ಮೂಲಕ ಜೀವನದ ಕೊನೆಯವರೆಗೂ ಹೋರಾಡಿದವರು ಸಾಶಿಮರು. ಅವರ ಉಪದೇಶ, ಸಂದೇಶಗಳಲ್ಲಿ ನೈಜ ಅನುಭವವನ್ನು ಕಾಣುತ್ತೇವೆ. ಜಾತಿ, ಮತ, ವರ್ಣ ಮೊದಲಾದ ಮಾನವ ನಿರ್ಮಿತ ಸಂಕಲೆಗಳನ್ನು ಬದಿಗೊತ್ತಿ ಸ್ನೇಹಜೀವಿಯಾಗಿ, ಹೃದಯಸ್ಪರ್ಶಿಯಾಗಿ, ಪ್ರಾಮಾಣಿಕನಾಗಿ, ನಿಷ್ಠುರವಾದಿಯಾಗಿ, ಖಂಡನಾಕಾರನಾಗಿ, ವಿಚಾರದಾರ್ಶನಿಕರಾಗಿ ಬಾಳಿ ಬದುಕುವ ಮೂಲಕ ಮಾನವೀಯತೆಯನ್ನು ಮೆರೆದಿದ್ದಾರೆ. ಅಂತೆಯೇ ವರ್ಗ–ವರ್ಣ, ಬಡವ–ಶ್ರೀಮಂತ, ಮೇಲು–ಕೀಳು, ಹಿರಿಯ–ಕಿರಿಯ, ಆಳು–ಅರಸು, ಹೆಣ್ಣು–ಗಂಡು, ಮಡಿ–ಮೈಲಿಗೆ ಮುಂತಾದ ತಾರತಮ್ಯಗಳನ್ನು ಕಿತ್ತೊಗೆಯಲು ಅಜ್ಞಾನ, ಅಂಧಾನುಕರಣೆ, ಮೂಢನಂಬಿಕೆಗಳನ್ನು ನಿರಾಕರಿಸಲು ಸತ್ಯ, ಪ್ರೀತಿ, ಕರುಣೆ , ಶಾಂತಿ ಕ್ಷಮೆ ತ್ಯಾಗಭಕ್ತಿಗಳೆಂಬ ಮಾನವೀಯ ಮೌಲ್ಯಗಳೇ ಮಾರ್ಗ ಎಂಬುದನ್ನು ನಾವಿಂದು ಮನಗಾಣಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


೧. ಆರ್. ಬಸವರಾಜು – ಸಾಶಿಮ ಬದುಕು ಬರಹ

೨. ಎನ್ ಸುಶೀಲ – ಕುವೆಂಪು ನಾಟಕಗಳು ಗುರು–ಗುರಿ

೩. ವೀರಮ್ಮ – ಕನ್ನಡ ಮಹಿಳಾ ಸಾಹಿತ್ಯದಲ್ಲಿ ವೈಚಾರಿಕತೆ

೪. ವೈ.ಬಿ. ಹಿಮ್ಮಡಿ – ಕನ್ನಡ ವೈಚಾರಿಕ ಸಾಹಿತ್ಯ

೫. ಶಾಂತಿನಾಥ ದಿಬ್ಬದ – ವೈಚಾರಿಕ ಲೇಖನಗಳು

೬. ಸಾಶಿಮ – ಕವನಗಳು, ಕಾದಂಬರಿಗಳು